ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 13/02/2020

### ಕೇಂದ್ರ ಸಂಪುಟ ಒಪ್ಪಿಗೆ ರೈತರ ಹಿತರಕ್ಷಣೆಗೆ ಇನ್ನೊಂದು ಹೆಜ್ಜೆ

# ಕೀಟನಾಶಕ ವ್ಯಾಪಾರ ನಿಯಂತ್ರಣಕ್ಕೆ ಮಸೂದೆ

**ನವದೆಹಲಿ:** ಕೃಷಿಯಲ್ಲಿ ಬಳಸುವ ಕೀಟನಾಶಕಗಳ ವ್ಯಾಪಾರ ನಿಯಂತ್ರಣಕ್ಕೆ ಸಂಬಂಧಿಸಿದ ಮಸೂದೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಕಳಪೆ ಕೀಟನಾಶಕ ಬಳಕೆಯಿಂದ ನಷ್ಟ ಎದುರಿಸುವ ರೈತರಿಗೆ ಪರಿಹಾರ ಒದಗಿಸುವುದು ಇದರ ಪ್ರಮುಖ ಉದ್ದೇಶ.



ಕಳಪೆ ಕೀಟನಾಶಕದಿಂದ ರೈತರಿಗೆ ನಷ್ಟವಾದರೆ ತಪ್ಪಿತಸ್ಥ ಕಂಪನಿಯಿಂದ ಸಂಗ್ರಹಿಸುವ ದಂಡ ಹಾಗೂ ಅಗತ್ಯ ಬಿದ್ದರೆ ಸರ್ಕಾರ ಒದಗಿಸುವ ಹಣದಿಂದ ಮೂಲ ನಿಧಿ ರೂಪಿಸಲಾಗುತ್ತದೆ. ಅದರಿಂದ ಸಂತ್ರಸ್ತ ಬೇಸಾಯಗಾರರಿಗೆ ಪರಿಹಾರ ಒದಗಿಸಲಾಗುವುದು ಎಂಬ ಅಂಶ ಮಸೂದೆಯಲ್ಲಿ ಇದೆ. ರೈತರ ಹಿತರಕ್ಷಣೆ ಸರ್ಕಾರದ ಪ್ರಧಾನ ಕಾಳಜಿಯಾಗಿರುವುದರಿಂದ ಈ ಮಸೂದೆಯನ್ನು ಎರಡನೇ ಹಂತದ ಬಜೆಟ್ ಅಧಿವೇಶನದಲ್ಲಿ ಮಂಡಿಸಲಾಗುತ್ತದೆ ಎಂದು ಸಂಪುಟ ಸಭೆಯ ನಂತರ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದರು.

## ಬಂದರು ಪ್ರಾಧಿಕಾರ ತಿದ್ದುಪಡಿಗೆ ಅಸ್ತು

ಬೃಹತ್ ಬಂದರುಗಳ ಪ್ರಾಧಿಕಾರದ 1963ರ ಕಾಯ್ದೆಗೆ ತಿದ್ದುಪಡಿ ಮಂಡಿಸುವ ಮಸೂದೆಗೂ ಸಂಪುಟ ಅನುಮೋದನೆ ನೀಡಿದೆ. ದೇಶದ 12 ದೊಡ್ಡ ಬಂದರುಗಳ ಒಟ್ಟಾರೆ ದಕ್ಷತೆಯನ್ನು ಹೆಚ್ಚಿಸುವುದು ತಿದ್ದುಪಡಿ ಉದ್ದೇಶ. ಈ 12 ಬಂದರುಗಳಲ್ಲಿ ನವ ಮಂಗಳೂರಿನ ರೇವು ಕೂಡ ಸೇರಿದೆ.

**'ವಿವಾದ್ ಸೇ ವಿಶ್ವಾಸ್'ಗೆ ಅಸ್ತು:** 2020ರ ನೇರ ತೆರಿಗೆಗೆ ಸಂಬಧಿಸಿದ 'ವಿವಾದ್ ಸೇ ವಿಶ್ವಾಸ್' ಮಸೂದೆಯಲ್ಲಿ ಬದಲಾವಣೆಗಳನ್ನು ತರುವ ಪ್ರಸ್ತಾಪಕ್ಕೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ. ವಿವಿಧ ಸಾಲ ವಸೂಲಾತಿ ನ್ಯಾಯಾಧಿಕರಣಗಳಲ್ಲಿ (ಡಿಆರ್‌ಟಿ) ಬಾಕಿಯಿರುವ ಪ್ರಕರಣಗಳನ್ನು ನಿರ್ವಹಿಸುವ ಅವಕಾಶವನ್ನು ವಿಸ್ತರಿಸುವುದು ಇದರ ಉದ್ದೇಶವಾಗಿದೆ.

**ವಿಮಾ ಕಂಪನಿಗಳಿಗೆ ನೆರವು:** ಸರ್ಕಾರಿ ಸ್ವಾಮ್ಯದ ನ್ಯಾಷನಲ್, ಓರಿಯಂಟಲ್ ಮತ್ತು ಯುನೈಟೆಡ್ ಇಂಡಿಯಾ ವಿಮಾ ಸಂಸ್ಥೆಗಳಿಗೆ ₹ 2,500 ಕೋಟಿ ಬಂಡವಾಳ ಒದಗಿಸುವುದಕ್ಕೆ ಸಂಪುಟ ಒಪ್ಪಿಗೆ ನೀಡಿದೆ.